4002/5057/6021/7021

**First Semester 3 Year LL.B./IV Semester 5 Year B.A.LL.B. (Maj.-Min. System)/B.B.A.LL.B./B.Com.LL.B. Examination, October/November 2021**
**CONTRACT – I/LAW OF GENERAL CONTRACT**

Duration : 3 Hours Max. Marks : 80

**Instructions : 1. Answer any five Questions from group (a), each question carries 10 marks.**
**2. Answer any five Questions from group (b), each question carries 06 marks.**
**3. Answer should be written either in English or Kannada completely.**

Q. No. 1. a) Explain the essentials of a valid contract. Marks : 10

ಒಂದು ಕಾನೂನುಬದ್ಧ ಕರಾರಿನ ಅವಶ್ಯಕ ಅಂಶಗಳನ್ನು ವಿವರಿಸಿರಿ.

Q. No. 1. b) 'A' a customer, picks up an article in a departmental store and takes it to the cash counter. B, a clerk at cash counter refuses to sell as it is only a sample, but not for sale. 'A' wants to institute a suit against the owner of the store for breach of contract. Advise 'A'. Marks : 6

'ಅ' ಎಂಬ ಒಬ್ಬ ಗ್ರಾಹಕನು ವಿಭಾಗೀಯ ಅಂಗಡಿಯಲ್ಲಿ ಒಂದು ವಸ್ತುವನ್ನು ಆಯ್ದು ಅದನ್ನು ನಗದು ಪಾವತಿಸುವ ಸ್ಥಳಕ್ಕೆ ತೆಗೆದುಕೊಂಡು ಹೋದನು. ನಗದು ಸ್ಥಳದ ಗುಮಾಸ್ತನಾದ 'ಬ'ನು ಅದು ಕೇವಲ ಸಮೂನೆಯಾಗಿದ್ದರಿಂದ ಮಾರಾಟಕ್ಕೆ ಇಡದ ಕಾರಣದಿಂದ ಮಾರಾಟ ಮಾಡಲು ನಿರಾಕರಿಸಿದನು. 'ಅ'ನು ಆ ಅಂಗಡಿಯ ಮಾಲಿಕನ ವಿರುದ್ಧ ಕರಾರಿನ ಉಲ್ಲಂಘನೆಗಾಗಿ ದಾವೆಯನ್ನು ಹೂಡಲು ಬಯಸುತ್ತಾನೆ. 'ಅ'ನಿಗೆ ಸಲಹೆಯನ್ನು ನೀಡಿರಿ.

Q. No. 2. a) Explain the doctrine of 'Privity of Contract' with exceptions, if any. Marks : 10

'ಕರಾರು ಗೌಪ್ಯತೆ' ಸಿದ್ಧಾಂತವನ್ನು ಅಪವಾದಗಳಿದ್ದರೆ ಅವುಗಳೊಂದಿಗೆ ವಿವರಿಸಿರಿ.

**P.T.O.**

Q. No. 2. b) Ramu invited his friends for dinner. His friends agreed to attend the dinner. Ramu and his wife prepared the food by spending Rs. 10,000/-. But Ramu's friends failed to attend the dinner. Ramu wants to institute a suit against his friend for breach of contract. Can he do so ? Marks : 6

ರಾಮು ತನ್ನ ಸ್ನೇಹಿತರನ್ನು ರಾತ್ರಿ ಊಟಕ್ಕೆ ಆಹ್ವಾನಿಸಿದನು. ಅವನ ಸ್ನೇಹಿತರು ಊಟಕ್ಕೆ ಬರಲು ಒಪ್ಪಿಕೊಂಡರು. ರಾಮು ಮತ್ತು ಅವನ ಹೆಂಡತಿ ಹತ್ತು ಸಾವಿರ ರೂಪಾಯಿ ಖರ್ಚುಮಾಡಿ ಅಡುಗೆಯನ್ನು ತಯಾರಿಸಿದರು. ಆದರೆ ರಾಮುವಿನ ಸ್ನೇಹಿತರು ಊಟಕ್ಕೆ ಬರಲಿಲ್ಲ. ರಾಮು ತನ್ನ ಸ್ನೇಹಿತರ ವಿರುದ್ಧ ಕರಾರಿನ ಉಲ್ಲಂಘನೆಗಾಗಿ ದಾವೆಯನ್ನು ಹೂಡಲು ಬಯಸುತ್ತಾನೆ. ಅವನು ಹಾಗೆ ಮಾಡಬಹುದೇ ?

Q. No. 3. a) Who are competent to contract ? Explain the effects of minor's agreement. Marks : 10

ಕರಾರನ್ನು ಮಾಡಿಕೊಳ್ಳಲಿಕ್ಕೆ ಯಾರು ಅರ್ಹರು ? ಅಪ್ರಾಪ್ತ ವಯಸ್ಕನು ಮಾಡಿಕೊಂಡ ಒಪ್ಪಂದದ ಪರಿಣಾಮಗಳನ್ನು ವಿವರಿಸಿರಿ.

Q. No. 3. b) 'A' kidnaps B's son and threatens to kill B's son if 'B' does not sign a contract. Then 'B' signs. There after 'B' wants to set a side the contract. Can he do so ? Marks : 6

'ಅ' ನು 'ಬ'ನ ಮಗನನ್ನು ಅಪಹರಣ ಮಾಡುತ್ತಾನೆ ಮತ್ತು 'ಬ'ನು ಒಂದು ಕರಾರಿಗೆ ಸಹಿಯನ್ನು ಹಾಕದಿದ್ದರೆ 'ಬ'ನ ಮಗನನ್ನು ಕೊಲ್ಲುವುದಾಗಿ ಬೆದರಿಕೆಯನ್ನು ಹಾಕುತ್ತಾನೆ. ಆಗ 'ಬ'ನು ಸಹಿಯನ್ನು ಹಾಕುತ್ತಾನೆ. ಆ ನಂತರ 'ಬ'ನು ಆ ಕರಾರನ್ನು ರದ್ದುಗೊಳಿಸಲು ಬಯಸುತ್ತಾನೆ. ಅವನು ಹಾಗೆ ಮಾಡಬಹುದೇ ?

Q. No. 4. a) 'An agreement in restraint of trade is void'. Explain and state the exceptions. Marks : 10

'ವೃತ್ತಿಯನ್ನು ನಿರ್ಬಂಧಿಸುವ ಒಪ್ಪಂದ ಶೂನ್ಯ'. ಇದನ್ನು ವಿವರಿಸಿರಿ ಮತ್ತು ಅದಕ್ಕಿರುವ ಅಪವಾದಗಳನ್ನು ಹೇಳಿರಿ.

Q. No. 4. b) 'A' and 'B' entered into an agreement whereby 'A' should pay Rs. 10,000/- to 'B', if it rains on a specified day, otherwise 'B' should pay Rs. 10,000/- to 'A'. It rains on that specified day. Can 'B' recover the amount from 'A' in a court of law ? Marks : 6

'ಅ' ಮತ್ತು 'ಬ' ಒಂದು ಒಪ್ಪಂದವನ್ನು ಮಾಡಿಕೊಂಡು ಅದರಂತೆ ಒಂದು ನಿಗದಿತ ದಿನದಂದು ಮಳೆಯಾದರೆ 'ಅ'ನು 'ಬ'ನಿಗೆ 10,000 ರೂಪಾಯಿ ಕೊಡಬೇಕು. ಮಳೆಯಾಗದಿದ್ದರೆ 'ಬ'ನು 'ಅ'ನಿಗೆ 10,000 ರೂಪಾಯಿ ಕೊಡಬೇಕು. ಆ ನಿಗದಿತ ದಿನದಂದು ಮಳೆಯಾಗುತ್ತದೆ. 'ಬ'ನು ನ್ಯಾಯಾಲಯದಲ್ಲಿ 'ಅ'ನಿಂದ ಹಣವನ್ನು ವಸೂಲಿ ಮಾಡಬಹುದೇ ?

**Q. No. 5. a)** Explain the different modes of discharge of contract. **Marks : 10**

ಕರಾರಿನ ವಿಸರ್ಜನೆಯ ವಿವಿಧ ಪ್ರಕಾರಗಳನ್ನು ವಿವರಿಸಿ.

**Q. No. 5. b)** 'A' a dancer agreed to dance in the theater of 'B' at a future date. Thereafter, 'A' met with an accident and lost both of her legs in that accident. Hence, she failed to give dance programme in the theater of 'B'. 'B' instituted a suit against 'A' for breach of contract. Decide. **Marks : 6**

'ಅ' ಎಂಬ ನರ್ತಕಿಯು 'ಬ' ನ ರಂಗಮಂದಿರದಲ್ಲಿ ಮುಂಬರುವ ಒಂದು ದಿನ ನರ್ತಿಸುವುದಾಗಿ ಮಾತನ್ನು ಕೊಟ್ಟಳು. ಆ ನಂತರ 'ಅ' ಳು ಒಂದು ಅಪಘಾತಕ್ಕೆ ಗುರಿಯಾಗಿ ಆ ಅಪಘಾತದಲ್ಲಿ ತನ್ನ ಎರಡೂ ಕಾಲುಗಳನ್ನು ಕಳೆದುಕೊಂಡಳು. ಆ ಕಾರಣಕ್ಕಾಗಿ 'ಅ' ಳು 'ಬ' ನ ರಂಗಮಂದಿರದಲ್ಲಿ ನೃತ್ಯ ಕಾರ್ಯಕ್ರಮವನ್ನು ಕೊಡಲು ವಿಫಲಳಾದಳು. 'ಬ' ನು 'ಅ' ಳ ವಿರುದ್ಧ ಕರಾರಿನ ಉಲ್ಲಂಘನೆಗಾಗಿ ದಾವೆಯನ್ನು ಹೂಡಿದನು. ನಿರ್ಣಯಿಸಿ.

**Q. No. 6. a)** What is 'Breach of Contract' ? Explain the types of breach of contract. **Marks : 10**

ಕರಾರಿನ ಉಲ್ಲಂಘನೆ ಎಂದರೇನು ? ಕರಾರಿನ ಉಲ್ಲಂಘನೆಯ ಪ್ರಕಾರಗಳನ್ನು ವಿವರಿಸಿ.

**Q. No. 6. b)** Write a short note on : 'Appropriation of Payment'. **Marks : 6**

'ಸಂದಾಯ ಮಾಡಿದ ಹಣದ ಹಂಚಿಕೆಯು' ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

**Q. No. 7. a)** What is Quasi-Contract ? When does Quasi-Contractual liability arise ? **Marks : 10**

ಅರೆ ಕರಾರು ಎಂದರೇನು ? ಅರೆ ಕರಾರಿನ ಹೊಣೆಗಾರಿಕೆ ಯಾವಾಗ ಉದ್ಭವವಾಗುತ್ತದೆ ?

**Q. No. 7. b)** 'A' was a tenant in B's house. 'B' failed to pay Municipal taxes. Municipality announced auction sale of the house to recover taxes. 'A' paid taxes to avoid the sale. Can 'A' recover the amount from 'B' ? **Marks : 6**

'ಅ'ನು 'ಬ'ನ ಮನೆಯಲ್ಲಿ ಬಾಡಿಗೆದಾರನಾಗಿದ್ದನು. 'ಬ'ನು ನಗರಸಭೆಯ ಕರವನ್ನು ತುಂಬಲಿಲ್ಲ. ಆ ಕರ ವಸೂಲಿ ಮಾಡಲು ನಗರ ಸಭೆಯು 'ಬ'ನ ಮನೆಯನ್ನು ಹರಾಜಿನ ಮೂಲಕ ಮಾರಾಟ ಮಾಡುವುದಾಗಿ ಘೋಷಿಸಿತು. ಆ ಮಾರಾಟವನ್ನು ತಪ್ಪಿಸಲು 'ಅ'ನು ಕರದ ಹಣಸಂದಾಯ ಮಾಡಿದನು. 'ಅ'ನು ಆ ಹಣವನ್ನು 'ಬ'ನಿಂದ ವಸೂಲಿ ಮಾಡಬಹುದೇ ?

Q. No. 8. a) Explain 'Special Damages' and 'Liquidated damages'. Marks : 10

'ವಿಶೇಷ ಪರಿಹಾರಧನ ' ಮತ್ತು 'ಪೂರ್ವ ನಿರ್ಧರಿತ ಪರಿಹಾರಧನ ' ವನ್ನು ವಿವರಿಸಿರಿ.

Q. No. 8. b) 'X' contracts with 'Y' to pay 'Y' Rs. 1,00,000/- if he fails to supply the goods worth Rs. 20,000 to 'Y' on a particular day. 'X' fails to supply the goods on that day. Is 'Y' entitled to recover Rs. 1,00,000 from 'X' ? Marks : 6

'X' ನು 'Y' ನ ಜೊತೆಗೆ ಒಂದು ಕರಾರನ್ನು ಮಾಡಿಕೊಳ್ಳುತ್ತಾನೆ. ಅದರಲ್ಲಿ ಒಂದು ನಿರ್ದಿಷ್ಟಪಡಿಸಿದ ದಿನದಂದು 'X' ನು 20,000 ರೂಪಾಯಿ ಮೌಲ್ಯವುಳ್ಳ ಸರಕುಗಳನ್ನು 'Y' ಗೆ ಪೂರೈಸದಿದ್ದರೆ 'X' ನು 'Y' ಗೆ 1,00,000 ರೂಪಾಯಿಯನ್ನು ಕೊಡುವುದಾಗಿ ವಚನ ಕೊಟ್ಟನು. ಆ ನಿರ್ದಿಷ್ಟಪಡಿಸಿದ ದಿನದಂದು 'X' ನು ಸರಕುಗಳನ್ನು ಪೂರೈಸಲು ವಿಫಲನಾದನು. 'Y' ನು 'X' ನಿಂದ 1,00,000 ರೂಪಾಯಿಯನ್ನು ವಸೂಲಿ ಮಾಡಲು ಹಕ್ಕನ್ನು ಹೊಂದಿದ್ದಾನೆಯೇ ?

Q. No. 9. a) Explain the contracts which cannot be specifically enforced under the Specific Relief Act. Marks : 10

ನಿರ್ದಿಷ್ಟ ಪರಿಹಾರ ಅಧಿನಿಯಮದಡಿಯಲ್ಲಿ ನಿರ್ದಿಷ್ಟ ನೆರವೇರಿಕೆಯನ್ನು ಕೇಳಲಾಗದ ಕರಾರುಗಳನ್ನು ವಿವರಿಸಿರಿ.

Q. No. 9. b) 'A' is B's medical advisor. He demands money of which 'B' declines to pay. 'A' then threatens to make known the effect of B's communication to him as a patient. 'B' wants to institute a suit against 'A'. Advise B. Marks : 6

'ಅ'ನು 'ಬ'ನ ವೈದ್ಯಕೀಯ ಸಲಹೆಗಾರನಾಗಿದ್ದಾನೆ. ಅವನು ಕೇಳಿದಷ್ಟು ಹಣವನ್ನು ಕೊಡಲು 'ಬ'ನು ನಿರಾಕರಿಸುತ್ತಾನೆ. ಆಗ 'ಅ'ನು ಒಬ್ಬ ರೋಗಿಯಾಗಿ 'ಬ'ನು ಅವನಿಗೆ ನೀಡಿದ ಮಾಹಿತಿಯನ್ನು ಬಹಿರಂಗಪಡಿಸುವುದಾಗಿ 'ಬ'ನಿಗೆ ಬೆದರಿಕೆಯನ್ನು ಹಾಕುತ್ತಾನೆ. 'ಬ'ನು 'ಅ'ನ ವಿರುದ್ಧ ದಾವೆಯನ್ನು ಹೂಡಲು ಬಯಸುತ್ತಾನೆ. 'ಬ'ಗೆ ಸಲಹೆಯನ್ನು ನೀಡಿರಿ.

Q. No. 10. a) Explain the provisions relating to the cancellation of Instruments. Marks : 10

ಲಿಖಿತ ಪತ್ರಗಳನ್ನು ರದ್ದುಗೊಳಿಸುವುದಕ್ಕೆ ಸಂಬಂಧಿಸಿದ ಕಾನೂನಿನ ನಿಯಮಗಳನ್ನು ವಿವರಿಸಿರಿ.

Q. No. 10. b) Write a short note on : Marks : 6

Declaratory relief.

ಘೋಷಣಾತ್ಮಕ ಪರಿಹಾರದ ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

---